ಹೇಗಿದ್ದಿರಬಹುದು ಎಂದು ಕನಸಿನ ಪ್ರಪಂಚದಲ್ಲಿ ತೇಲಾಡಲಾರಂಭಿಸುತ್ತೇನೆ. ಈ ಕಾರಣದಿಂದಲೋ (ಅಥವಾ ಪೂರ್ವಜನ್ಮದ ಸ್ಮರಣೆಯೋ?) ಏನೋ ಕೊಡಗು, ಕರಾವಳಿ, ಮಲೆನಾಡು, ದಕ್ಷಿಣಕನ್ನಡ ಹಾಗೂ ಕೇರಳ ಪ್ರದೇಶಗಳ ಜೊತೆ ಬಲವಾದ ಮಾನಸಿಕ ನೆಂಟುತನ ಬೆಳೆಸಿರುವ ನಾನು, ದಿನಪತ್ರಿಕೆಯಲ್ಲಿ ತಲಕಾವೇರಿ, ಭಾಗಮಂಡಲ, ಕಕ್ಕಬೆ, ಮರವಂತೆ, ಕೋಟ, ಭಟ್ಕಳ, ಕಾರವಾರ, ಆಗುಂಬೆ, ತೀರ್ಥಹಳ್ಳಿ, ಸಾಗರ, ಶಿವಮೊಗ್ಗ, ಸಂಪಾಜೆ, ಸುಳ್ಯ, ಬೆಳ್ಳಾರೆ ಎಂದು ಹತ್ತು ಹಲವಾರು ಊರುಗಳ ಮಳೆ ವರದಿಯನ್ನು ನನ್ನ ಹೊರಗಣ್ಣು ಓದುತ್ತಿದ್ದರೆ ಒಳಗಣ್ಣು ಆಯಾ ಊರುಗಳ ಮಳೆಯ ನೋಟ ಕಾಣಲಾರಂಭಿಸುತ್ತದೆ. ಒಂದು ಮಳೆಗಾಲವಿಡೀ ಈ ಪ್ರದೇಶಗಳಲ್ಲಿ ಸುತ್ತಬೇಕೆಂಬ ಬಲವತ್ತರವಾದ ಆಸೆ ಉಂಟಾಗುತ್ತದೆ.

ನಮ್ಮ ಕನಸಿನ ಮನೆ 'ಶ್ರೀಶ' ಕಟ್ಟಲಾರಂಭಿಸಿ ಕಟ್ಟಡ ಕ್ಯೂರಿಂಗ್ ಹಂತಕ್ಕೆ ಬಂದು ನಿಂತಿದ್ದಾಗ ಶುರುವಾದ ಮುಂಗಾರುಮಳೆ ನಮ್ಮ ಮನೆ ಕ್ಯೂರಿಂಗ್ ಮಾಡಿತು. ದೇವರು ಮಾಡಿದ ಆಶೀರ್ವಾದ ಇದು ಎಂದು ಖುಷಿ ಪಟ್ಟದ್ದೂ ಉಂಟು. ಹಸಿರಿಂದ ಆವೃತ್ತವಾದ ಶ್ರೀಶ, ಪಟ್ಟಣದ ಗದ್ದಲದಿಂದ ಬೇಸತ್ತಿದ್ದ ನನ್ನ ಮನಕ್ಕೆ ಶಾಂತಿ ನೀಡಿದ್ದಲ್ಲದೆ, ಮಲೆನಾಡಿನ ಸಣ್ಣ ಹಳ್ಳಿಯಲ್ಲಿ ನೆಲೆಸಿ ಆ ಪರಿಸರದಲ್ಲಿ ಮಳೆಗಾಲ ಕಳೆಯಬೇಕೆಂಬ ನನ್ನ ಆಸೆಯನ್ನು ಬಹುಮಟ್ಟಿಗೆ ಈಡೇರಿಸಿದೆ.

ಮೊನ್ನೆಮೊನ್ನೆ ಬರಡಾಗಿ ಕಾಣುತ್ತಿದ್ದ ಮನೆಯ ಸುತ್ತಲಿನ ಆವರಣ ಒಂದೆರಡು ಮಳೆಯಾದ ತಕ್ಷಣ ದಿಢೀರನೆ ಹಲವಾರು ಸಸ್ಯಪ್ರಭೇದಗಳಿಂದ ತುಂಬುವುದನ್ನು ನೋಡಿ ವಿಸ್ಮಯವಾಗುತ್ತದೆ. ಬಹಳ ದಿನಗಳಿಂದ ಕಾಣದೆ ಇದ್ದಕ್ಕಿದ್ದ ಹಾಗೆ ಪ್ರತ್ಯಕ್ಷರಾಗುವ ಸ್ನೇಹಿತರಂತೆ ಬರುವ ಈ ನನ್ನ ಮುದ್ದುಗಳನ್ನು ನೋಡಿ, 'ಅರೇ! ಇಷ್ಟು ದಿನ ಎಲ್ಲಿದ್ರೀ ನೀವು?!' ಎಂದು ಹಲವಾರು ಬಾರಿ ಕೇಳಿದ್ದಿದೆ. ಶುಭ್ರವಾಗಿ ತೊಳೆದಿಟ್ಟಂತಿರುವ ಮನೆಯ ಅಂಗಳ, ಹೊಳೆಯುವ ಹಸಿರುವನ, ನಳನಳಿಸುತ್ತಿರುವ ಥರಾವರಿ ಹಸಿರಿನ ಗಿಡಮರಗಳನ್ನು, ಅವು ಹೊತ್ತಿರುವ ಹೂವುಹಣ್ಣುಗಳನ್ನು ನೋಡಿದಾಗ ಸಿಗುವ ತೃಪ್ತಿ, ಆನಂದ ಅವರ್ಣನೀಯ. ಈ ಪರಿಸರದಲ್ಲಿ ನಿಂತಿದ್ದಾಗ ಮುಖವನ್ನು ಸವರಿ ಹೋಗುವ ಮಂದಾನಿಲ, ಅವು ಹೊತ್ತು ತರುವ ಜಾಜಿ, ಮಲ್ಲಿಗೆ, ಪಾರಿಜಾತಗಳ ಕಂಪು, ಪಾದಗಳನ್ನು ಮೃದುವಾಗಿ ಚುಂಬಿಸುವ ಹುಲ್ಲಿನಹಾಸು, ಮಧುರಗಾನದಂತೆ ಕೇಳುವ ಅಳಿಲುಗಳ ಹಾಗೂ ತರಹೇವಾರಿ ಪಕ್ಷಿಗಳ ಸಂಭಾಷಣೆ ಇವುಗಳನ್ನು ಯಾವ ಛಾಯಾಚಿತ್ರ ಸೆರೆಹಿಡಿಯಲು ಸಾಧ್ಯ?

ಮಾಳಿಗೆ ಮೇಲೆ ಬೀಳುವ ನೀರನ್ನು ಶುದ್ಧೀಕರಿಸಿ ಸಂಪ್‌ಗೆ ಸೇರಿಸುವ ಮಳೆನೀರಿನ ಬಾವಿಯಲ್ಲಿ ಬೀಳುವ ನೀರಿನ ಝುಳುಝುಳು ಶಬ್ದ ಮಗುವಿನ ಗೆಜ್ಜೆಯ ನಿನಾದದಷ್ಟೇ ಹಿತವಾಗಿ ಕೇಳಿ, ಯಾವುದೋ ಅವ್ಯಕ್ತ ಆಕರ್ಷಣೆಗೊಳಗಾದಂತೆ ಬಾವಿಯ ಹತ್ತಿರ ಹೋಗಿ ಆಮೆಮರಿ ಇದೆಯೋ ಏನೋ! ಎಂದು ಹಳೆಯ ನೆನಪಿನ ಭ್ರಾಂತಿಗೊಳಗಾಗಿ ಬಗ್ಗಿ ನೋಡಿದರೆ, ನೀರಿನ ಪ್ರತಿಬಿಂಬದಲ್ಲಿ ಗಂಗೆಪೂಜೆ ಮಾಡುತ್ತಿರುವ ಅಮ್ಮನ ರೂಪ ಮೂಡಿಬಂದು ಕಣ್ಣಾಲಿಗಳು ತುಂಬಿ ಬರುತ್ತವೆ.


**ಅನುರಾಧಾ ರಾವ್ ನಾಡಿಗ್**

ಮೈಸೂರಿನಲ್ಲಿ ಹುಟ್ಟಿದ ಅನುರಾಧಾ ಮೈಸೂರಿನ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರಿಂಗ್‌ನಲ್ಲಿ ಕಂಪ್ಯೂಟರ್ ಎಂಜಿನಿಯರಿಂಗ್ ಪದವಿ ಪಡೆದಿದ್ದಾರೆ.

ಕನ್ನಡ ಸಾಹಿತ್ಯದಲ್ಲಿ ವಿಶೇಷ ಒಲವು. ಶಿವರಾಮ ಕಾರಂತ ಹಾಗೂ ಎಸ್.ಎಲ್. ಭೈರಪ್ಪ ಅವರ ಮೆಚ್ಚಿನ ಲೇಖಕರು. ಸಂಸ್ಕೃತ ಅಧ್ಯಯನದ ಜೊತೆಗೆ ಕರ್ನಾಟಕ ಸಂಗೀತ ಕಲಿಯುತ್ತಿದ್ದಾರೆ. ಪ್ರಸ್ತುತ ಬೆಂಗಳೂರಿನಲ್ಲಿ ನೆಲೆಸಿದ್ದಾರೆ.